# ಶ್ರೀ ರತ್ನ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ಸರ್ವೆ ನಂ.26/5 ಮೊದಲನೇ ಮಹಡಿ, ನ್ಯೂ ಬ್ಯಾಂಕ್ ಕಾಲೋನಿ, ಅಮೃತನಗರ ಮುಖ್ಯರಸ್ತೆ ಕೋಣನಕುಂಟೆ ಬೆಂಗಳೂರು-560062

**ದಿನಾಂಕ:19/12/2020 ರಂದು ಶನಿವಾರ ಬೆಳಗ್ಗೆ 10:30ಕ್ಕೆ ನಡೆದ /3ನೇ ವಾರ್ಷಿಕ ಸರ್ವ ಸದಸ್ಯರ ಸಾಮಾನ್ಯ ಸಭೆಯ (ವರ್ಚ್ಯುಯಲ್) ನಡಾವಳಿ**

1. ಸಂಘದ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಕೆ.ಬಿ.ಲಕ್ಷ್ಮಣ್ ಅವರು ಸಭೆಯ ಆಧ್ಯಕ್ಷತೆಯನ್ನು ವಹಿಸಿದ್ದರು.
2. ಸಭೆಗೆ 119 ಮಂದಿ ಸದಸ್ಯರು ಲಾಗಿನ್ ಆಗಿದ್ದರು.
3. ಸಂಘದ ಉಪಾಧ್ಯಕ್ಷರಾದ ಶ್ರೀಯುತ ಶ್ರೀಧರ್.ಎಲ್ ಅವರು ಸಭೆಗೆ ಎಲ್ಲರನ್ನೂ ಸ್ವಾಗತಿಸಿದರು, ಹಾಗೂ ನಿರ್ದೇಶಕ ಮಂಡಲಿ ಸದಸ್ಯರನ್ನು ಸಭೆಗೆ ಪರಿಚಯಿಸಿದರು.
4. ಸಂಘದ 3ನೇ ಸಾಮಾನ್ಯ ಸಭೆಯ ತಿಳುವಳಿಕೆ ಪತ್ರವನ್ನು ಶ್ರೀ ಸಂತೋಷ್.ಜೆ ಅವರು ಸಭೆಯ ಮುಂದೆ ಓದಿದರು, ಅದನ್ನು ದಾಖಲು ಮಾಡಲಾಯಿತು.
5. ದಿನಾಂಕ 14/9/2019 ರಂದು ನಡೆದ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡಾವಳಿಯನ್ನು ಓದಿದಂತೆ ಪರಿಗಣಿಸಿ ದಾಖಲಿಸಲಾಯಿತು.
6. ವರದಿ ಸಾಲಿನಲ್ಲಿ ದೈವಧೀನರಾದ ಇಬ್ಬರು ಸದಸ್ಯರುಗಳಿಗೆ ಸಂತಾಪವನ್ನು ಸೂಚಿಸಲಾಯಿತು.
7. 2019-20ನೇ ಸಾಲಿನ ವಾರ್ಷಿಕ ವರದಿಯನ್ನು ಎಂ.ಎಸ್. ಸತ್ಯನಾರಾಯಣ ರಾವ್ ಅವರು ಸಭೆಯ ಮುಂದೆ ಮಂಡಿಸಿದರು, ಸದರಿ ವರದಿಯನ್ನು ಸಭೆಯು ಪರಿಶೀಲಿಸಿ, ಅನುಮೋದಿಸಿತು.
8. 2020-21, 2021-22 ಹಾಗೂ 2021-23 ಸಾಲುಗಳಿಗೆ, ಆಯವ್ಯಯ ಹಾಗೂ ಗುರಿ ನಿಗದಿ ಪಡಿಸಿರುವುದರ ಪ್ರಸ್ತಾವವನ್ನು ಸಭೆಯ ಮುಂದೆ ಮಂಡಿಸಲಾಯಿತು, ಸಭೆಯು ಇದನ್ನು ಅಂಗೀಕರಿಸಿತು ಹಾಗೂ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸಲಾಯಿತು.
9. ಸಂಘವು 2017-18ನೇ ಸಾಲಿನಲ್ಲಿ 14741 ರೂಗಳ ಲಾಭವನ್ನು ಗಳಿಸಿತ್ತು. ಸಂಘವು ವರದಿ ಸಾಲಿನಲ್ಲಿ ರೂ.24,33,280 ಗಳಿಸಿದೆ ಹಿಂದಿನ ಸಾಲಿನಲ್ಲಿ ಅಂದರೆ 2018-19 ರಲ್ಲಿ 21,43,304 ರೂಗಳ ನಷ್ಟವನ್ನು ಅನುಭವಿಸಿತ್ತು. ವರದಿ ಸಾಲಿನ ಲಾಭವನ್ನು ಹಿಂದಿನ ಸಾಲಿನ ನಷ್ಟಕ್ಕೆ *ಸರಿದೂಗಿಸಿದ, ಬಳಿಕ ಹಣ ರೂ.3,04,417* ನ್ನು ಕಾಯಿಟ್ಟ ನಿಧಿಗೆ (Reserve Fund) ವರ್ಗಾವಣೆ ಮಾಡಲು ಅನುಮತಿಯನ್ನು ಕೋರಲಾಯಿತು ಸಭೆ ಅದಕ್ಕೆ ಸಮ್ಮತಿಸಿತು.
10. 2019-20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿಯನ್ನು ಸಭೆಯ ಮುಂದೆ ಮಂಡಿಸಲಾಯಿತು. ಅದನ್ನು ಪರಿಶೀಲಿಸಿ, ಸಭೆ ಅನುಮೋದನೆ ನೀಡಿತು.
11. 2020-21 ನೇ ಸಾಲಿಗೆ ಸನ್ನದು ಲೆಕ್ಕ ಪರಿಶೋಧನೆಗಾಗಿ ಸುಧಾಕರ್ ಪೈ ಅಸೋಸಿಯೇಟ್ಸ್ ಅವರನ್ನು ಸರ್ವಾನುಮತದಿಂದ ನೇಮಕಾತಿ ಮಾಡಲಾಯಿತು. ಸಭೆಯ ವಿಷಯಗಳನ್ನು

ಮಂಡಿಸುವ ಸಂದರ್ಭದಲ್ಲಿ ಶ್ರೀಯುತ ಎಂ.ಎಸ್.ಸತ್ಯನಾರಾಯಣ ರಾವ್ ಅವರು, ಕೆಲವು ಉಪಯುಕ್ತ ಮಾಹಿತಿಯನ್ನು ಸಭೆಗೆ ತಿಳಿಸಿದರು.

- ಸಂಘವು ನಡೆದು ಬಂದ ದಾರಿ, ಸಾಧಿಸಲಾಗಿರುವ ಪ್ರಗತಿಯನ್ನು ವಿವರಿಸಿದರು.
- ಆಡಳಿತ ಮಂಡಲಿಯ ವರದಿಯಲ್ಲಿ ವಿವರಿಸಲಾಗಿರುವ ಅಂಕಿ ಅಂಶಗಳನ್ನು ಸಭೆಗೆ ತಿಳಿಸಿದರು,
- ಸದಸ್ಯರು ಗುರತಿನ ಚೀಟಿಯನ್ನು ಹೊಂದಿರುವುದು, ಕಾನೂನು ರೀತ್ಯಾ ಅವಶ್ಯಕವಾಗಿರುವುದರಿಂದ, ಈಗಾಗಲೇ ಗುರುತಿನ ಚೀಟಿಯನ್ನು ಪಡೆಯದೇ ಇರುವ ಸದಸ್ಯರು, ಕಛೇರಿಯಲ್ಲಿ ಪಡೆಯಬಹುದು ಎಂದು ತಿಳಿಸಿದರು ಷೇರು ಪ್ರಮಾಣಪತ್ರವನ್ನು ಪಡೆಯದೇ ಇರುವ ಸದಸ್ಯರು, ಕಛೇರಿಯಲ್ಲಿ ಪಡೆಯಬೇಕೆಂದು ವಿನಂತಿಸಿದರು
- ಸಂಘದಲ್ಲಿ ಲಭ್ಯವಿರುವ, ಕನಿಷ್ಠ ಸೇವೆಯನ್ನು ಸಂಘದ ಸದಸ್ಯರು, ಕಾನೂನು ರೀತ್ಯಾ ಪಡೆಯಬೇಕಾಗಿರುತ್ತದೆ ಎಂದು ತಿಳಿಸಿದರು ಹಾಗೂ ವಿವರಗಳಿಗೆ, ಸಂಘದ ಕಛೇರಿಗೆ ಭೇಟಿ ಕೊಡಬೇಕಾಗಿ ಪ್ರಾರ್ಥಿಸಿದರು.

12. ಉಪಾಧ್ಯಕ್ಷರು ಮಾತನಾಡಿ ಎಲ್ಲರಿಗೂ ಮತ್ತೊಮ್ಮೆ ಸ್ವಾಗತವನ್ನು ಕೋರಿದರು. ಕೋವಿಡ್–19, ಸಾಂಕ್ರಾಮಿಕ ರೋಗ ಹರಡುವುದರ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶದ ಮೇರೆಗೆ ಈ ವರ್ಚ್ಯುಯಲ್ ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸಿದರು.

    ಸಂಘವು ಪ್ರಾರಂಭವಾಗಿ ಎರಡು ವರ್ಷದ ಅವಧಿಯಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ ಎಂದರು. ಕಳೆದ ಸಾಲಿಗೆ ಹೋಲಿಸಿದರೆ, ವರದಿ ಸಾಲಿನಲ್ಲಿ ಷೇರು ಬಂಡವಾಳ, ಠೇವಣಿಗಳು ಹಾಗೂ ಸಾಲ ಮುಂಗಡಗಳು ಗಮನಾರ್ಹ ಹೆಚ್ಚಳವನ್ನು ಸಾಧಿಸಿದೆ ಎಂದರು. ವರದಿ ಸಾಲಿನಲ್ಲಿ ಸಂಘವು 24,33,280 ರೂಗಳ ಲಾಭವನ್ನುಗಳಸಿದೆ ಎಂದು ತಿಳಿಸಿ ಹರ್ಷವನ್ನು ವ್ಯಕ್ತಪಡಿಸಿದರು. ಇದಕ್ಕೆ ಸಂಭಂದಿಸಿದ ಎಲ್ಲಾ ಅಂಕಿ ಅಂಶಗಳನ್ನು ವಾರ್ಷಿಕ ವರದಿಯಲ್ಲಿ ನೀಡಲಾಗಿದೆ, ಹಾಗೂ ಸಂಘದ ವೆಬ್ ಸೈಟಿನಲ್ಲಿ ಪ್ರಕಟಿಸಲಾಗಿದೆ ಎಂದು ತಿಳಿಸಿದರು.

    ಕೋವಿಡ್–19 ಸಾಂಕ್ರಾಮಿಕ ರೋಗದ ಹಾವಳಿಯ ನಡುವೆಯೂ, ನಮ್ಮ ಸಾಲ ಮರುಪಾವತಿ ಉತ್ತಮವಾಗಿರುತ್ತದೆ ಎಂದು ತಿಳಿಸಿದರು. ಇನ್ನು ಮುಂದೆಯೂ ಹಲವಾರು ಯೋಜನೆಗಳನ್ನು ರೂಪಿಸಿಕೊಂಡು ಸಂಘದ ಶ್ರೀಯೋಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಸುತ್ತೇವೆ ಎಂದು ಅಧ್ಯಕ್ಷರ ಪರವಾಗಿ ಹಾಗೂ ಆಡಳಿತ ಮಂಡಲಿಯ ಪರವಾಗಿ ತಿಳಿಸಿದರು.

    ಸಂಘವು ವರದಿ ಸಾಲಿನಲ್ಲಿ ಹೆಚ್ಚಿನ ಪ್ರಗತಿಗೆ ಕಾರಣವಾಗಿರುವುದು, ಮಾನ್ಯ ಸದಸ್ಯರ ಬೆಂಬಲದಿಂದ, ಮುಂದೆಯೂ ಇದೇ ರೀತಿ ಬೆಂಬಲವನ್ನು ನಮಗೆ ನೀಡಿದರೆ, ಸಂಘವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯ ಬಹುದು, ಎಂದು ತಿಳಿಸಿದರು. ಹಾಗೂ, ಸದಸ್ಯರುಗಳು ಸಂಘದ

ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸಂಘದ ಬೆಳವಣಿಗೆ ಕಾರಣಕರ್ತರಾಗಬೇಕೆಂದು ಭಿನ್ನವಿಸಿದರು. ಸದಸ್ಯರು, ತಮ್ಮ ಕುಂದು ಕೊರತೆಯೇನಾದರೂ ಇದ್ದಲ್ಲಿ ತಮ್ಮನ್ನು ನೇರವಾಗಿ ಸಂಪರ್ಕಸಬಹುದು ಎಂದರು. ಕೊನೆಯಲ್ಲಿ ಅಧ್ಯಕ್ಷರಿಗೆ ಹಾಗೂ ಸಂಘದ ನಿರ್ದೇಶಕ ಮಂಡಲಿಗೆ ಕೃತಜ್ಞತೆಯನ್ನು ಅರ್ಪಿಸಿದರು, ಅಂತೆಯೇ ಪ್ರಾಮಾಣಿಕವಾಗಿ, ಶ್ರದ್ಧೆಯಿಂದ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗಕ್ಕೂ ಅಭಿನಂದನೆಗಳನ್ನು ತಿಳಿಸಿ, ತಮ್ಮ ಭಾಷಣವನ್ನು ಮುಗಿಸಿದರು.

13. ಉಪವಿಧಿಗಳ ತಿದ್ದುಪಡಿ ಯಾವುದು ಇರಲಿಲ್ಲವಾದ ಕಾರಣ ಅದನ್ನು ಸಭೆಯ ಮುಂದೆ ಮಂಡಿಸಿಲ್ಲ.

14. ಇತರ ವಿಷಯಗಳು ಯಾವುವೂ ಇರಲಿಲ್ಲ ಡಾ. ನಿಂಗರಾಜ್ ಇ.ಸಿ Mno:SRC/RSM/33 ಅನುಮೋದಿಸಿದರು ಹಾಗೂ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು

15. Mrs. ಶ್ರೀಮತಿಯವರು ಸಭೆಗೆ ವಂದನೆಗಳನ್ನು ಅರ್ಪಿಸಿದರು ಸಭೆಯು 11:30ಕ್ಕೆ ಮುಕ್ತಾಯವಾಯಿತು.

ಕೆ.ಬಿ.ಲಕ್ಷ್ಮಣ್
ಅಧ್ಯಕ್ಷರು

ಸಂತೋಷ್.ಜೆ
ಮು.ಕಾ.ನಿ(ಪ್ರಭಾರ)